(ದಿನಾಂಕ 12-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ಸಾಕ್ಷಿಗೆ ಪ್ರತಿವಾದ ಪತ್ರದಲ್ಲಿರುವ ಸಹಿಯನ್ನು ತೋರಿಸಿ ಸದರಿ ಸಹಿಯು ತಮ್ಮದೇ ಸಹಿಯಾಗಿರುತ್ತದೆಂದು ಕೇಳಲಾಗಿ ಸಾಕ್ಷಿಯು ಹೌದು ಎಂದು ಉತ್ತರಿಸಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ವೀರನಗೌಡರವರು ವಾದಿಯ ಗಂಡ ಎಂಬುದು ಸತ್ಯವಾಗಿದೆ ಆರ್ ಪಂಪನಗೌಡರವರು ಪ್ರತಿವಾದಿ 1 ರವರ ಗಂಡ ಎಂಬುದು ಸತ್ಯವಾಗಿದೆ. ಪಿ.ವೀರನಗೌಡ ಮತ್ತು ಆರ್ ಪಂಪನಗೌಡರವರ ಜೀವಿತಾವಧಿಯಲ್ಲಿ ದಾವಾ ಶೆಡ್ಯೂಲ್ ಆಸ್ತಿ ಸರ್ವೆ ನಂ.306 ವಿಸ್ತೀರ್ಣ 5.51 ಎಕರೆ ಮತ್ತು ಸರ್ವೆ ನಂ.7 ಬಿ-3 ವಿಸ್ತೀರ್ಣ 3.57 ಎಕರೆ ಆಸ್ತಿಗಳನ್ನು ಅವರಿಬ್ಬರ ಜಂಟಿಯಾಗಿ ಕೊಟ್ಟ ಹಣದಿಂದ ದಿಃ 09-05-1963 ರಂದು ರೂ.400/- ಗಳಿಗೆ ಅಡಿವೆಪ್ಪ ಮತ್ತು ಕೆಂಚಪ್ಪ ತಂದೆ ಗೊಲ್ಲರ ಮರಿಯಜ್ಜರವರ ಕಡೆಯಿಂದ ಖರೀದಿಸಿರುತ್ತಾರೆಂದು ಬರೆಸಿರುತ್ತೇನೆಂದರೆ ಸರಿ.

ದಾವಾಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿ. ನಾನು ಸರ್ವೆ ನಂ. 7 ಬಿ-3 ರ 1 ಎಕರೆ 87 ಸೆಂಟ್ಸ ಸ್ವತ್ತನ್ನು ಪ್ರವೀಣ್ ಪಾಟೀಲ್ ರವರಿಂದ ಖರೀದಿಸಿರುತ್ತೇನೆ. ಖರೀದಿಯ ಬಗ್ಗೆ ನಮ್ಮ ಅಂಗಡಿಯಲ್ಲಿ ಮೇ ಮಾಹೆಯ 2011 ನೇ ಸಾಲಿನಲ್ಲಿ ಮಾತುಕತೆಯಾಗಿರುತ್ತದೆ. ಒಟ್ಟು 62 ಸಾವಿರ ರೂಗಳಿಗೆ ಸದರಿ ಸ್ವತ್ತಿನ ಖರೀದಿಯ ಬಗ್ಗೆ ಮಾತುಕತೆಯಾಗಿತ್ತು. ಮಾತುಕತೆಯಾದ ದಿನವೇ ಪ್ರವೀಣ್ ಪಾಟೀಲ್ ರವರಿಗೆ ರೂ.10 ಸಾವಿರ ಕೊಟ್ಟಿರುತ್ತೇವೆ. ಉಳಿದ ಮೊತ್ತವನ್ನು ನೊಂದಣಿಯಾದ ನಂತರ ಕೊಟ್ಟಿರುತ್ತೇವೆ. ಈ ವಿಷಯವನ್ನು ನಾನು ನನ್ನ ಖರೀದಿ ಪತ್ರದಲ್ಲಾಗಲೀ ಪ್ರತಿವಾದ ಪತ್ರದಲ್ಲಾಗಲೀ ಮತ್ತು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ಆಗಲೀ ಬರೆಸಿರುವುದಿಲ್ಲ

ಪ್ರವೀಣ್ ಪಾಟೀಲ್ ರವರು ಸದರಿ ಆಸ್ತಿಯನ್ನು ರೆಡ್ಡಿ ಬಸವನಗೌಡರಿಂದ ಖರೀದಿ ಮಾಡಿರುವ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುತ್ತೇನೆ. ಎಷ್ಟನೇ ಇಸವಿಯಲ್ಲಿ ಪ್ರವೀಣ್

ಪಾಟೀಲ್ ರವರು ಸದರಿ ಆಸ್ತಿಯನ್ನು ರೆಡ್ಡಿ ಬಸವನಗೌಡರಿಂದ ಎಷ್ಟು ಪ್ರತಿಫಲಕ್ಕೆ ಖರೀದಿ ಮಾಡಿದರೆಂದು ನನಗೆ ಗೊತ್ತಿರುವುದಿಲ್ಲ. ಪ್ರವೀಣ್ ಪಾಟೀಲ್ ರವರು ಹೊಸಪೇಟೆಯ ವಾಸಿಯಾಗಿರುತ್ತಾರೆ. ಸದರಿಯವರು ಹೊಸಪೇಟೆಯ ವಾಸಿಯಾದ ಕಾರಣ ಸದರಿ ಆಸ್ತಿಯಲ್ಲಿ ಸ್ವಾಧೀನತೆ ಇರಲಿಲ್ಲವೆಂದರೆ ಸರಿಯಲ್ಲ. ನಾನಾಗಲೀ, ಪ್ರವೀಣ್ ಪಾಟೀಲ್‌ರವರಾಗಲೀ ಸರ್ವೆ ನಂ. 7 ಬಿ-3 ರ 1 ಎಕರೆ 87 ಸೆಂಟ್ಸ ಸ್ವತ್ತಿನಲ್ಲಿ ಸ್ವಾಧೀನತೆಯಲ್ಲಿ ಇರುವುದಿಲ್ಲವೆಂದರೆ ಸರಿಯಲ್ಲ.

ಪ್ರವೀಣ್ ಪಾಟೀಲ್‌ರವರು ರೆಡ್ಡಿ ಬಸವನಗೌಡರಿಂದ ಯಾವ ಯಾವ ಆಸ್ತಿಗಳನ್ನು ಖರೀದಿಸಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಈ ವಿಷಯದ ಬಗೆಗ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದು ನನಗೆ ಗೊತ್ತಿರುವುದಿಲ್ಲ

ನಾನು ನನ್ನ ಪ್ರತಿವಾದ ಪತ್ರದಲ್ಲಿ ಪ್ರವೀಣ್ ಪಾಟೀಲ್‌ರವರು ಯಾವ ಯಾವ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆನ್ನುವ ಬಗ್ಗೆಯಾಗಲೀ, ಬಿ ಜಿ ನಾಗರಾಜ್ ರವರು ಯಾವ ಆಸ್ತಿಗಳನ್ನು ಯಾವ ದಿನಾಂಕಕ್ಕೆ ಎಷ್ಟು ಹಣಕ್ಕೆ ಮಾರಾಟ ಮಾಡಿರುತ್ತಾರೆನ್ನುವ ಸಂಗತಿಗಳನ್ನು ಬರೆಸಿರುವುದಿಲ್ಲ. ನಾನು ದಾವಾಸ್ತಿಯನ್ನು ನೋಡಿರುವುದಿಲ್ಲವೆಂದರೆ ಸರಿಯಲ್ಲ. ನಾನು ಇತರೆ ಪ್ರತಿವಾದಿಗಳ ಜೊತೆ ಸೇರಿ ದಾಖಲಾತಿಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಕಾರಣ ನನಗೆ ಸದರಿ ದಾವೆಯ ಬಗೆಗಯಾಗಲೀ, ದಾವಾಸ್ತಿಯ ಬಗ್ಗೆಯಾಗಲೀ ಗೊತ್ತಿರದಿದ್ದರೂ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ